ಪ್ರಕರಣ ಮೂರರಲ್ಲಿ ಶ್ರೀ ವೆಂಕಟರಮಣ ನಿವೃತ್ತ ಜಂಟಿ ನಿರ್ದೇಶಕ ಕರ್ನಾಟಕ ಇಂಜಿನಯರಿಂಗ್ ಸಂಶೋಧನಾ ಕೇಂದ್ರ ಅವರಿಂದ ತನಿಖೆ ನಡೆಸಿ ಅವರ ವರದಿಯ ಆಧಾರದ ಮೇಲೆ ಹಾಗೂ ಶ್ರೀ ಶ್ರೀರಾಮಯ್ಯ ತನಿಖಾ ವರದಿ ಆಧಾರದ ಮೇಲೆ ಶ್ರೀ ಸಿ.ಕೆ. ಬಾಲಕೃಷ್ಣ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ಇಲಾಖೆ ವಿಚಾರಣೆ ನೆಡಸಲು ಆದೇಶ ಮಾಡಲಾಗಿದೆ. ವಿಚಾರಣೆ ಪ್ರಗತಿಯಲ್ಲಿದೆ. ಹೆಚ್ಚುವರಿ ಹಣ ಪಾವತಿ ವಿವಿಧ ಹಂತದಲ್ಲಿಯಾಗಿದ್ದು ಆಪಾದಿತರನ್ನು ವಿಚಾರಣೆಯಲ್ಲಿ ನಿರ್ಧರಿಸಬೇಕಾಗಿದೆ.

ಈ) ಪ್ರಕರಣ 1 ಮತ್ತು 2ಕ್ಕೆ ಸಂಬಂಧಿಸಿದಂತೆ ಅಂತಿಮ ಇಲಾಖಾ ವರದಿಯು ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. ಪ್ರಕರಣ 3 ರಲ್ಲಿ ಈವರೆಗೆ ರೂ. 101.52 ಲಕ್ಷಗಳನ್ನು ಬ್ಯಾಂಕ್ ಗ್ಯಾರಂಟಿ ನಗದೀಕರಣದ ರೂಪದಲ್ಲಿ ಗುತ್ತಿಗೆದಾರರಿಗೆ ನೀಡಿದ್ದ ಹೆಚ್ಚಿನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ, ಇನ್ನುಳಿದ ಮೊತ್ತವನ್ನು ಇತರೆ ಮೂಲಗಳಿಂದ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಹಾದಾಯಿ ಯೋಜನೆ ಕುರಿತು

134(310) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾದಿಯಿ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆಯೇ; ಅನಮೋದನೆ ನೀಡಿದ್ದಲ್ಲಿ ಪೂರ್ಣ ವಿವರ ನೀಡುವುದು;

ಆ) ಯೋಜನೆಯ ಅಂದಾಜು ಮೊತ್ತ ಎಷ್ಟು? (ಯೋಜನೆಯ ಮಾಹಿತಿ ನೀಡುವುದು)

ಇ) ಕಾಮಗಾರಿಯ ಅನುಷ್ಠಾನದ ಉಸ್ತುವಾರಿಯನ್ನು ಯಾರಿಗೆ ನೀಡಲಾಗಿದೆ? ಎಂದಿನಿಂದ ಕಾಮಗಾರಿ ಪ್ರಾಂಭಗೊಳ್ಳಲಿದೆ? (ವಿವರ ನೀಡುವುದು)

ಈ) ಯೋಜನೆ ಪೂರ್ಣಗೊಳ್ಳಲು ಕಾಲಮಿತಿ ನಿಗದಿಗೊಳಿಸಿದೆಯೆ?

ಉ) ಯೋಜನೆಗೆ ಹಣವನ್ನು ಯಾವ ಮೂಲದಿಂದ ಕ್ರೋಢೀಕರಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಮಹಾದಾಯಿ ನದಿ ಕೊಳ್ಳದಿಂದ 7.56 ಟಿಎಂಸಿ ಪ್ರಮಾಣದ ನೀರನ್ನು ಮಲಪ್ರಭಾ ನದಿಗೆ ತಿರುಗಿಸಲು ಕೇಂದ್ರ ಸರ್ಕಾರವು ಏಪ್ರಿಲ್ 2002ರಲ್ಲಿ ತಾತ್ವಿಕ ಒಪ್ಪಿಗೆ ನೀಡಿರುತ್ತದೆ.

ಆ) ಮಹಾದಾಯಿ ತಿರುವು ಯೋಜನೆಯ ಘಟಕಗಳಾದ ಕಳಸಾ ನಾಲಾ ಯೋಜನೆ ಮತ್ತು ಬಂಡೂರ ನಾಲಾ ಯೋಜನೆಗಳ ಅಂದಾಜು ಮೊತ್ತ ಕ್ರಮವಾಗಿ ರೂ. 44.78 ಕೋಟಿ ಹಾಗೂ ರೂ. 49.20 ಕೋಟಿಗಳಾಗಿವೆ.

ಇ) ಕಳಸಾ ನಾಲಾ ಮತ್ತು ಬಂಡೂರು ನಾಲಾ ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವಹಿಸಲಾಗಿದೆ.

ಕಳಸಾ ಮತ್ತು ಬಂಡೂರ ನಾಲಾ ತಿರುವು ಯೋಜನೆಗಳ ಸರ್ವೆ, ತನಿಖೆ ವಿನ್ಯಾಸ, ಅಂದಾಜು ಪತ್ರಿಕೆ ಮತ್ತು ಕರಡು ದರಪಾಸ್ತುಗಳನ್ನು ತಯಾರಿಸುವ ಕಾರ್ಯವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಗೆ ವಹಿಸಲಾಗಿದೆ. ಆದಷ್ಟು ತೀವ್ರವಾಗಿ ಕೆಲಸ ಪ್ರಾರಂಭಿಸಲಾಗುವುದು.

ಈ) ಮಹಾದಾಯಿ ಯೋಜನೆಯ ಘಟಕಗಳಾದ ಕಳಸಾ ಮತ್ತು ಬಂಡೂರ ನಾಲಾ ಯೋಜನೆಗಳನ್ನ 2004 ರ ಒಳಗಾಗಿ ಪೂರ್ಣಗೊಳಿಸಲು ಯೋಚಿಸಿದೆ.

ಉ) ಕರ್ನಾಟಕ ನೀರಾವರಿ ನಿಗಮ ನಿಯಮಿತದ ಹಣದಿಂದ ಕಾಮಗಾರಿಯನ್ನು ನಿರ್ವಹಿಸಲಾಗುವುದು.

ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು

136(140) ಶ್ರೀ ವಿ. ಕೃಷ್ಣಪ್ಪ (ದೊಡ್ಡ ಬಳ್ಳಾಪುರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಸಂಖ್ಯೆ ಎಷ್ಟು?

2) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಇರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟು?

3) ರಾಜ್ಯದಲ್ಲಿ ಹೆಚ್ಚು ಹಾಲು ಉತ್ಪಾದನೆಯಾಗುವ ಜಿಲ್ಲೆ ಮತ್ತು ತಾಲ್ಲೂಕು ಯಾವುದು?

4) ಈ ಸಂಘಗಳಲ್ಲಿ ಲಾಭದಾಯಕವಾಗಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು? ನಷ್ಟದಲ್ಲಿರುವ ಸಂಘಗಳೆಷ್ಟು? ಹಾಗೂ ಹಣ ದುರುಪಯೋಗಪಡಿಸಿಕೊಂಡಿರುವ ಸಂಘಗಳೆಷ್ಟು ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

1) ರಾಜ್ಯದಲ್ಲಿ ಒಟ್ಟು 8845 ಹಾಲು ಉತ್ಪಾದಕರ ಸಹಕಾರ ಸಂಘಗಳು ನೊಂದಣಿಯಾಗಿರುತ್ತದೆ.

2) ಬೆಂಗಳೂರು ನಗರ ಜಿಲ್ಲೆಯಲ್ಲಿ 312 ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ 1007 ಹಾಲು ಉತ್ಪಾದಕರ ಸಹಕಾರ ಸಂಘಗಳು ಇರುತ್ತದೆ.

3) ರಾಜ್ಯದಲ್ಲಿ ಅತಿ ಹೆಚ್ಚು ಹಾಲು ಉತ್ಪಾದನೆ ಆಗುವ ಜಿಲ್ಲೆ ಕೋಲಾರ ಜಿಲ್ಲೆ, ಮತ್ತು ಅತಿ ಹೆಚ್ಚು ಉತ್ಪಾದನೆಯಾಗುವ ತಾಲ್ಲೂಕು ದೇವನಹಳ್ಳಿ ತಾಲ್ಲೂಕು (ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ) ಆಗಿರುತ್ತದೆ.

4) ಈ ಸಂಘಗಳ ಪೈಕಿ 7114 ಸಂಘಗಳು ಲಾಭದಲ್ಲಿದ್ದು, ಮತ್ತು 379 ಸಂಘಗಳು ನಷ್ಟದಲ್ಲಿರುತ್ತವೆ. 1333 ಸಂಘಗಳಲ್ಲಿ ಹಣ ದುರುಪಯೋಗವಾಗಿರುತ್ತದೆ. ಈ ಪೈಕಿ 506 ಪ್ರಕರಣಗಳಲ್ಲಿ ನೋಟೀಸು ಜಾರಿ ಮಾಡಿದೆ. 530 ಪ್ರಕರಣಗಳಲ್ಲಿ ಕಲಂ 70 ರಂತೆ ದಾವೆ ಹೂಡಲಾಗಿದೆ. 10 ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುತ್ತದೆ. 10 ಪ್ರಕರಣಗಳಲ್ಲಿ